# ವಿದ್ಯುದಾಗಾರ ಬಳಿ ಅಕ್ರಮ ಕಲ್ಲು ಗಣಿ!

## ಪ.ಘಟ್ಟ ಪ್ರದೇಶದಲ್ಲೇ ಸಿಡಿಯುತ್ತಿವೆ ಬಂಡೆಗಳು



**ಹೊಸನಗರ ತಾಲೂಕು ನಿಡಗೋಡು ಬಳಿ ಮಾಸ್ತಿಕಟ್ಟೆ-ಹಳಗುಂದದಲ್ಲಿ ವಾರಾಹಿ ಪಿಕ್ ಅಪ್ ಜಲಾಶಯದ ಬಳಿ ಅಕ್ರಮವಾಗಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆ.**

■ ***ಸಂತೋಷ್ ಕಾಚಿನಕಟ್ಟೆ*** ಶಿವಮೊಗ್ಗ

ವಿಶ್ವದ ಅಪರೂಪದ ಜೀವ ವೈವಿಧ್ಯ ತಾಣಗಳಲ್ಲಿ ಒಂದಾದ ಪಶ್ಚಿಮಘಟ್ಟದ ದಟ್ಟ ಅರಣ್ಯ ಪ್ರದೇಶದಲ್ಲೇ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಕಠಿಣ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಕಳೆದೊಂದು ದಶಕದಿಂದ ದೊಡ್ಡ ಮಟ್ಟದಲ್ಲಿ ಇಲ್ಲಿ ಗಣಿಗಾರಿಗೆ ನಡೆಯುತ್ತಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಇದ್ಯಾವುದೂ ಗೊತ್ತೇ ಇಲ್ಲ ಎಂಬಂತೆ ವರ್ತಿಸುತ್ತಿದ್ದಾರೆ.

ಹೊಸನಗರ ತಾಲೂಕು ನಿಡಗೋಡು ಗ್ರಾ.ಪಂ ಮಾಸ್ತಿಕಟ್ಟೆ ಹಳಗುಂದದ ಸುಮಾರು 20 ಎಕರೆ ಪ್ರದೇಶದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಹೊಸಂಗಡಿಯ ಏಷ್ಯಾದ ಏಕೈಕ ಭೂಗರ್ಭ ವಿದ್ಯುದಾಗಾರಕ್ಕೆ ನೀರು ಹರಿಸುವ ವಾರಾಹಿ ಜಲಾಶಯದ ಪಿಕ್‌ಅಪ್ ಅಣೆಕಟ್ಟೆ ಪಕ್ಕದಲ್ಲೇ ಈ ಗಣಿ ಪ್ರದೇಶವಿದೆ. ಅಲ್ಲಿ ನಿರಂತರವಾಗಿ ಸಿಡಿಮದ್ದು ಸಿಡಿಸಿ ಕಲ್ಲುಗಳನ್ನು ಒಡೆಯಲಾಗುತ್ತಿದೆ.

ಪರಿಸರ ಮತ್ತು ಜಲಾಶಯದ ಭದ್ರತೆ ಹಿನ್ನೆಲೆಯಲ್ಲಿ ಅತಿಸೂಕ್ಷ್ಮ ಪ್ರದೇಶವೆನಿಸಿದ ಈ ಪ್ರದೇಶಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. ಅರಣ್ಯದೊಳಗೆ ಹಲವು ದಶಕಗಳಿಂದ ಮನೆ ಕಟ್ಟಿಕೊಂಡು ವಾಸ ಮಾಡುವವರನ್ನು ಪರಿಸರ ಸೂಕ್ಷ್ಮ ವಲಯದ ನೆಪವೊಡ್ಡಿ ಬೀದಿಪಾಲು ಮಾಡುವ ಅಧಿಕಾರಿಗಳು, 10 ವರ್ಷದಿಂದ ಇಲ್ಲಿ ನಡೆಯುತ್ತಿರುವ ದೊಡ್ಡ ಮಟ್ಟದ ಗಣಿಗಾರಿಕೆಯನ್ನು ಪೋಷಿಸಿಕೊಂಡು ಬಂದಿದ್ದಾರೆ.

»07

**ಕಂದಾಯ ಭೂಮಿಯಲ್ಲಿ ಹಲವು ವರ್ಷಗಳಿಂದ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಸ್ಥಳೀಯ ಆರ್‌ಎಫ್‌ಒ ಹಲವು ಬಾರಿ ದಾಳಿ ಮಾಡಿ ಎಚ್ಚರಿಕೆ ನೀಡಿದ್ದಾರೆ. ತಹಸೀಲ್ದಾರ್‌ಗೆ ಸಹ ಮಾಹಿತಿ ನೀಡಿದ್ದಾರೆ. ಇಷ್ಟಾಗಿಯೂ ಅಕ್ರಮ ಗಣಿಗಾರಿಕೆ ಮುಂದುವರಿದಿದೆ. ಇದರ ಬಗ್ಗೆ ಕಂದಾಯ ಇಲಾಖೆ ಹಿರಿಯ ಅಧಿಕಾರಿಗಳ ಗಮನ ಸೆಳೆಯಲಾಗುವುದು.**

**-ಮೋಹನ್ ಗಂಗೊಳ್ಳಿ**, ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ

**ಜಲಾಶಯ ಸಮೀಪ ಗಣಿಗಾರಿಕೆಗೆ ಅವಕಾಶವಿಲ್ಲ. ಆದರೆ, ಅಕ್ರಮವಾಗಿ ನಡೆಯುತ್ತಿರುವುದು ನನ್ನ ಗಮನದಲ್ಲಿಲ್ಲ. ಅಧಿಕಾರಿಗಳನ್ನು ಕಳಿಸಿ ಪರಿಶೀಲನೆನಡೆಸಲಾಗುವುದು.**

**-ದಿವಾಕರ್**
ಮುಖ್ಯ ಎಂಜಿನಿಯರ್, ಕೆಪಿಸಿ

# ವಿದ್ಯುದಾಗಾರ ಸಮೀಪ ಅಕ್ರಮ ಕಲ್ಲು ಗಣಿ!

» ಮೊದಲ ಪುಟದಿಂದ

ಪಶ್ಚಿಮಘಟ್ಟದ ಪರಿಸರ ಸೂಕ್ಷ್ಮ ...ದೇಶದಲ್ಲಿ ಯಾವುದೇ ರೀತಿಯ ...ಣಿಗಾರಿಕೆ ನಿಷೇಧವಿದೆ. ಜಲಾಶಯದ ...ಮೀಪದಲ್ಲಿ ಗಣಿಗಾರಿಕೆ ನಡೆಸುವುದಕ್ಕೆ ...ನೂನಿನಲ್ಲಿ ಅವಕಾಶವಿಲ್ಲ, ಗಣಿಗಾರಿಕೆ ...ಲ್ಲಿ ಸಿಡಿಯುವ ಕಲ್ಲುಗಳು, ಅಲ್ಲಿ ...ಂಟಾಗುವ ಧೂಳು ಮತ್ತು ಮಣ್ಣು ...ಶಯ ಸೇರುವುದು ಸಹ ನಿಯಮ ...ರುದ್ಧ. ಆದರೆ ಇಲ್ಲಿ ಕಾನೂನು, ನಿಯಮ ...ು ಗಣಿಗಾರಿಕೆಗೆ ಅಡ್ಡಿಯಾಗಿಲ್ಲ!

ಅಕ್ರಮ ಗಣಿಗಾರಿಕೆ ನಡೆಯುತ್ತಿರುವ ...ದೇಶವು ಕಂದಾಯ ಭೂಮಿಯಾದರೂ ...ರಿಸರ ಸೂಕ್ಷ್ಮ ಪ್ರದೇಶದಲ್ಲಿರುವುದರಿಂದ ...ರಣ್ಯ ಇಲಾಖೆಯ ಅನುಮತಿ ಕಡ್ಡಾಯ. ...ಶ್ಚಿಮಘಟ್ಟ ಪ್ರದೇಶವಾದ ಕಾರಣಕ್ಕೆ ...ರಣ್ಯ ಇಲಾಖೆ ಅನುಮತಿ ನಿರಾಕರಿಸಿದೆ. ...ಲಾಶಯಕ್ಕೆ ಸಮೀಪದಲ್ಲಿರುವುದರಿಂದ ...ರ್ನಾಟಕ ವಿದ್ಯುತ್ ನಿಗಮ(ಕೆಪಿಸಿ)ದ ಅನುಮತಿ ಕಡ್ಡಾಯವಾಗಿ ಬೇಕು. ಆದರೆ, ಕೆಪಿಸಿ ಅಧಿಕಾರಿಗಳನ್ನು ಕೇಳಿದರೆ ''ಹೌದಾ, ನಮ್ಮ ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಯುತ್ತಿದೆಯಾ? ನಮಗೆ ಅದರ ಬಗ್ಗೆ ಮಾಹಿತಿಯೇ ಇಲ್ಲ, ಕೂಡಲೆ ಗಮನಹರಿಸಿ ನಿಲ್ಲಿಸುತ್ತೇವೆ,'' ಎನ್ನುತ್ತಾರೆ.

ವರಾಹಿ ಪಿಕ್‌ಅಪ್ ಜಲಾಶಯದಿಂದ 50 ಮೀಟರ್, ತೀರ್ಥಹಳ್ಳಿ- ಕುಂದಾಪುರ ಜಿಲ್ಲಾ ಹೆದ್ದಾರಿಗೆ ಅರ್ಧ ಕಿ.ಮೀ ಅಂತರದಲ್ಲಿರುವ ಈ ಗಣಿಗಾರಿಕೆ ಪ್ರದೇಶವು 20 ಎಕರೆಗಿಂತಲೂ ಹೆಚ್ಚು ವಿಸ್ತಾರವಾಗಿದೆ. ಆ ಭಾಗದಲ್ಲಿ ಸಂಚರಿಸುವವರಿಗೆ ದೂರದಿಂದಲೆ ಗಣಿಗಾರಿಕೆ ಕಾಣುತ್ತದೆ. ವಿಶೇಷವೆಂದರೆ ವರಾಹಿ ಜಲಾಶಯದ ಪಕ್ಕದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆಯು ಉಪಗ್ರಹ ಚಿತ್ರದಲ್ಲೂ(ಗೂಗಲ್ ಅರ್ತ್) ಸ್ಪಷ್ಟವಾಗಿ ಗೋಚರಿಸುತ್ತದೆ. ಅಧಿಕಾರಿಗಳು ತಮ್ಮ ಗಮನದಲ್ಲಿ ಇಲ್ಲ ಎನ್ನುತ್ತಾರೆ.

ಪ್ರತಿದಿನ ಮುಂಜಾನೆ 5ರಿಂದ 6 ಗಂಟೆಯೊಳಗೆ ಬಂಡೆಗಳನ್ನು ಸಿಡಿಸಲಾಗುತ್ತದೆ. ಬಂಡೆ ಸಿಡಿಯುವ ಶಬ್ದ ಮೂರ್‍ನಾಲ್ಕು ಮೈಲು ದೂರಕ್ಕೆ ಕೇಳಿಸುತ್ತದೆ. ಆದರೆ, ಸಮೀಪದಲ್ಲೇ ಇರುವ ಕೆಪಿಸಿ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಕೇಳಿಸುವುದಿಲ್ಲ. ಸಿಡಿದ ಬಂಡೆಗಳು, ಗಣಿಗಾರಿಕೆಯಿಂದ ಉಂಟಾಗುವ ಧೂಳು ಸುತ್ತೆಲ್ಲ ಆವರಿಸಿಕೊಂಡಿದೆ. ರಸ್ತೆಗಳು ಗಣಿಗಾರಿಕೆ ಧೂಳಿನಿಂದ ತುಂಬಿದೆ. ಇದು ಕೂಡ ಅಧಿಕಾರಿಗಳಿಗೆ ಕಾಣಿಸುತ್ತಿಲ್ಲ.

**ಪಶ್ಚಿಮಘಟ್ಟ ಅರಣ್ಯ ಪ್ರದೇಶದಲ್ಲಿ ಈಗ ಅವಕಾಶವಿಲ್ಲ. ಈ ಹಿಂದಿನ ಪರವಾನಗಿ ನವೀಕರಣವಾಗಿಲ್ಲ. ಇಷ್ಟಾಗಿಯೂ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು.**

**-ರಶ್ಮಿ**, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ.

# ಬಿಎಚ್‌ಇಎಲ್ ತಂಡದಿಂದ ವೈಟಿಪಿಎಸ್ ಪರಿಶೀಲನೆ

**ರಾಯಚೂರು:** ಯರಮರಸ್ ಸೂಪರ್ ಕ್ರಿಟಿಕಲ್ ಶಾಖೋತ್ಪನ್ನ ವಿದ್ಯುತ್ ಕೇಂದ್ರ(ವೈಟಿಪಿಎಸ್)ದ ಮೊದಲ ಘಟಕದ ಉತ್ಪಾದನೆ ಪ್ರಮಾಣವನ್ನು 800 ಮೆಗಾವ್ಯಾಟ್‌ಗೆ ಕೊಂಡೊಯ್ಯುವ ಭಾಗವಾಗಿ ಬಿಎಚ್‌ಇಎಲ್‌ನ ಬೆಂಗಳೂರು ಹಾಗೂ ತ್ರಿಚ್ಚಿಯ ತಜ್ಞರ ತಂಡ ವೈಟಿಪಿಎಸ್‌ಗೆ ಬುಧವಾರ ಭೇಟಿ ನೀಡಿದ್ದು, ಪರಿಶೀಲನೆ ಆರಂಭಿಸಿದೆ. ಈ ಘಟಕದಲ್ಲಿ ವಾಣಿಜ್ಯ ಬಳಕೆ ವಿದ್ಯುತ್ ಉತ್ಪಾದನೆಗೆ ಭರದ ಸಿದ್ಧತೆ ನಡೆದಿದೆ. ಕಳೆದ ತಿಂಗಳಾಂತ್ಯಕ್ಕೆ ಪರೀಕ್ಷಾರ್ಥ ವಿದ್ಯುತ್ ಉತ್ಪಾದನೆ ಆರಂಭಗೊಂಡಿತ್ತು. ನಿರಂತರ ವಿದ್ಯುತ್ ಉತ್ಪಾದಿಸಲಾಗುತ್ತಿದ್ದು, ಬುಧವಾರ 500 ಮೆಗಾವ್ಯಾಟ್ ಉತ್ಪಾದನೆ ದಾಖಲಾಯಿತು. ಈ ಘಟಕದ ಸೇಫ್ಟಿ ವಾಲ್ವ್ ತಪಾಸಣೆಗೆ ಬಿಎಚ್‌ಇಎಲ್ ತಜ್ಞರ ಜಂಟಿ ತಂಡ ಭೇಟಿ ನೀಡಿದೆ. ವೈಟಿಪಿಎಸ್‌ನ ಚೀಫ್ ಎಂಜಿನಿಯರ್ ಲಕ್ಷ್ಮಣ ಕಬಾಡೆ ಸೇರಿ ಇತರ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿತು. ಈ ತಂಡದಿಂದ ಸುರಕ್ಷತೆಯ ಭರವಸೆ ದೊರೆತ ನಂತರ ಘಟಕದಲ್ಲಿ 800 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸಲಾವುಗುದು ಎಂದು ಕೆಪಿಸಿ ಎಂ.ಡಿ. ಕುಮಾರ್ ನಾಯಕ್ ಅವರು ತಿಳಿಸಿದ್ದಾರೆ. ತಾಂತ್ರಿಕ ಸಮಸ್ಯೆ ಎದುರಾಗದಂತೆ ಮುನ್ನೆಚ್ಚರಿಕೆ ಹೆಜ್ಜೆ ಇರಿಸಲಾಗಿದೆ ಎನ್ನಲಾಗುತ್ತಿದೆ.

ಕೆಪಿಸಿಸಿಗೆ ಹೊಸ ಸಾರಥಿ ನೇಮಕ ಪ್ರಸ್ತಾಪ

# ಹೈಕಮಾಂಡ್ ನೀಡುವ ಹೊಣೆಗೆ ಸಿದ್ಧ: ಡಿಕೆಶಿ

■ **ವಿಕ ಸುದ್ದಿಲೋಕ** ಬೆಂಗಳೂರು



''ಹಿರಿತನ, ಅನುಭವ ಇರುವ ನನಗೆ ಪಕ್ಷದ ಹೈಕಮಾಂಡ್ ಯಾವುದೇ ಜವಾಬ್ದಾರಿ ನೀಡಿದರೂ ನಿಭಾಯಿಸಲು ಸಿದ್ಧ'' ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಪಂಚರಾಜ್ಯಗಳ ಚುನಾವಣಾ ಫಲಿತಾಂಶದ ಬಳಿಕ ರಾಜ್ಯ ಕಾಂಗ್ರೆಸ್‌ಗೆ ಹೊಸ ಸಾರಥಿ ನೇಮಕ ನಡೆಯಲಿದೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಶಿವಕುಮಾರ್ ಅವರ ಈ ಹೇಳಿಕೆ ಮಹತ್ವ ಪಡೆದುಕೊಂಡಿದೆ.

ವಿಧಾನಸೌಧದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ''ಪ್ರಬಲ ಸಮಾಜದಿಂದ ಬಂದಿರುವ ನನಗೆ ಸೇವೆಯ ಹಂಬಲವಿದೆ. ಅರ್ಹತೆ, ಹಿರಿತನ ಮತ್ತು ಅನುಭವವೂ ಇದೆ. ವರಿಷ್ಠರು ಏನೇ ಜವಾಬ್ದಾರಿ ನೀಡಿದರೂ ನಿಭಾಯಿಸುತ್ತೇನೆ. ಆದರೆ, ನಾನು ವೈಯಕ್ತಿವಾಗಿ ಯಾವುದನ್ನೂ ಬಯಸಿಲ್ಲ. ಹೈಕಮಾಂಡ್ ನೀಡುವ ಹೊಣೆ ನಿರ್ವಹಿಸುವ ನಿಷ್ಠಾವಂತ ಕಾರ್ಯಕರ್ತ'' ಎಂದರು.

**ಎಚ್ಡಿಕೆ ವಿರುದ್ಧ ವಾಗ್ದಾಳಿ:** ''ವಿದ್ಯುತ್ ಖರೀದಿ ಹಗರಣಕ್ಕೆ ಸಂಬಂಧಿಸಿದ ಸದನ ಸಮಿತಿ ವರದಿ ಸಲ್ಲಿಕೆ ವಿಳಂಬವಾಗಲು ಕುಮಾರಸ್ವಾಮಿ ಅವರೇ ಕಾರಣ. ಅವರು ಒಮ್ಮೆ ಸಭೆಗೆ ಬಂದರೆ, ಮತ್ತೊಮ್ಮೆ ಸಮಿತಿ ಮೇಲೆ ನಂಬಿಕೆ ಇಲ್ಲ ಎಂದು ಹಿಂದೆ ಸರಿಯುತ್ತಾರೆ. ಅವರು ಸಮಿತಿ ಸದಸ್ಯರಾಗಿ ಸಕ್ರಿಯವಾಗಿ ಭಾಗವಹಿಸಿದರೆ ಶೀಘ್ರದಲ್ಲೇ ವರದಿ ನೀಡಲಾಗುವುದು'' ಎಂದು ಸಮಿತಿ ಅಧ್ಯಕ್ಷರೂ ಆದ ಶಿವಕುಮಾರ್ ಹೇಳಿದರು.

''ಶೋಭಾ ಕರಂದ್ಲಾಜೆ ಅವರು ಇಂಧನ ಸಚಿವರಾಗಿದ್ದ ಅವಧಿಯಲ್ಲಿ ವಿದ್ಯುತ್ ಖರೀದಿಯಲ್ಲಿ ವ್ಯಾಪಕ ಅವ್ಯವಹಾರ ನಡೆದಿದೆ ಎಂಬ ಆರೋಪವಿದೆ. ಇದು ನಿಜವೋ, ಇಲ್ಲವೋ ಎಂಬುದನ್ನು ಸಮಿತಿ ಅಧ್ಯಕ್ಷನಾಗಿ ಬಹಿರಂಗಪಡಿಸಲು ಸಾಧ್ಯವಿಲ್ಲ'' ಎಂದು ಅವರು ಪ್ರಶ್ನೆಯೊಂದಕ್ಕೆ ಸ್ಪಷ್ಟಪಡಿಸಿದರು.

SK Page No - 7

# ಸದನ ಸಮಿತಿ ಸಭೆ ಹೆಚ್‌ಡಿಕೆ ಗೈರಿಗೆ ಅತೃಪ್ತಿ



**ಬೆಂಗಳೂರು;** ವಿದ್ಯುತ್ ಖರೀದಿ ವ್ಯವಹಾರದ ಸದನ ಸಮಿತಿ ವರದಿ ಸಲ್ಲಿಕೆ ವಿಳಂಬವಾಗಲು ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರೇ ಕಾರಣ ಎಂದು ಇಂಧನ ಇಲಾಖೆ ಸಚಿವ ಡಿ.ಕೆ. ಶಿವಕುಮಾರ್ ಆಪಾದಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶೋಭಾ ಕರಂದ್ಲಾಜೆ ಅವರು ವಿದ್ಯುತ್ ಸಚಿವರಾಗಿದ್ದ ಸಂದರ್ಭದಲ್ಲಿ ವಿದ್ಯುತ್ ಖರೀದಿ ವ್ಯವಹಾರದಲ್ಲಿ ಭಾರೀ ಹಗರಣ ನಡೆದಿದೆ ಎಂದು ಆರೋಪಿಸಲಾಗಿತ್ತು. ಅದರ ಆಧಾರದ ಮೇಲೆ ತನಿಖೆ ನಡೆಸಲು ಸದನ ಸಮಿತಿ ರಚಿಸಲಾಗಿತ್ತು. ಈ ರೀತಿ ರಚಿಸಲಾದ ಸದನ ಸಮಿತಿ ಇದುವರೆಗೆ ವರದಿ ನೀಡಿಲ್ಲ ಎಂದು ಸುಖಾಸುಮ್ಮನೆ ಆರೋಪ ಮಾಡಲಾಗುತ್ತಿದೆ. ಆದರೆ ಈ ಸದನ ಸಮಿತಿಯ ಸದಸ್ಯರಾಗಿರುವ ಕುಮಾರಸ್ವಾಮಿ ಅವರು ಸದನ ಸಮಿತಿಯ ಸಭೆಗೇ ಹಾಜರಾಗುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅವರು ಕೊಡುವ ಅಲ್ಪಸ್ವಲ್ಪ ಮಾಹಿತಿಗಳ ಆಧಾರದ ಮೇಲೆ ಬಿಜೆಪಿ ಅವಧಿಯಲ್ಲಿ ವಿದ್ಯುತ್ ಖರೀದಿ ಹಗರಣ ನಡೆದಿದೆ ಎಂದು ಹೇಳಲು ಸಾಧ್ಯವಿಲ್ಲ. ಇದುವರೆಗಿನ ಮಾಹಿತಿ ನೋಡಿದರೆ ಶೋಭಾ ಕರಂದ್ಲಾಜೆಯವರು ವಿದ್ಯುತ್ ಸಚಿವರಾಗಿದ್ದ ಕಾಲದಲ್ಲಿ ಹಗರಣ ನಡೆದಿದೆ ಎಂದು ಅನ್ನಿಸುತ್ತಿಲ್ಲ. ಅವ್ಯವಹಾರದ ಆರೋಪ ಮಾಡಿದವರು ಯಾವ ರೀತಿ ಅವ್ಯವಹಾರ ನಡೆದಿದೆ ಎಂಬುದಕ್ಕೆ ಪೂರಕವಾದ ದಾಖಲೆಗಳನ್ನು ಒದಗಿಸಬೇಕು. ಇನ್ನಾದರೂ ಕುಮಾರಸ್ವಾಮಿಯವರು ಸದನ ಸಮಿತಿಯ ಸಭೆಗಳಿಗೆ ಹಾಜರಾಗಿ ತಮ್ಮ ಬಳಿ ಇರುವ ಸಾಕ್ಷ್ಯಗಳನ್ನು ನೀಡಲಿ ಎಂದು ಸಲಹೆ ನೀಡಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನು ಸ್ಪರ್ಧಿಯಲ್ಲ ನಾನು ಪಕ್ಷದ ಅಧ್ಯಕ್ಷನಾಗಬೇಕು ಎಂದು ಹೈಕಮಾಂಡ್ ವರಿಷ್ಠರು ಬಯಸಿದರೆ,ಆ ಜವಾಬ್ದಾರಿಯನ್ನು ವಹಿಸಿದರೆ ಅದನ್ನು ಹೊರಲು ಸಿದ್ಧ ಎಂದರು.

02.03.17

# ಕಾರ್ಮಿಕ, ಬೆಸ್ಕಾಂ, ಬ್ಯಾಂಕ್: ತಿಂಗಳ ಲೋಕ ಅದಾಲತ್

**ಬೆಂಗಳೂರು:** ರಾಜ್ಯದ ವಿವಿಧ ಹಂತದ ನ್ಯಾಯಾಲಯಗಳಲ್ಲಿ ವಿಚಾರ ಹಂತದಲ್ಲಿರುವ ರಾಜೀ ಸಂಧಾನದ ಮೂಲಕ ಇತ್ಯರ್ಥಪಡಿಸಬಹುದಾದ ಪ್ರಕರಣಗಳನ್ನು ಪ್ರತಿ ತಿಂಗಳ 2ನೇ ಶನಿವಾರದಂದು ಲೋಕ ಅದಾಲತ್ ಮೂಲಕ ಇತ್ಯರ್ಥ ಪಡಿಸುವುದಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮುಂದಾಗಿದೆ. ಮಾರ್ಚ್ ಎರಡನೇ ಶನಿವಾರದಂದು ನಡೆಯಲಿರುವ ಲೋಕ ಅದಾಲತ್‌ನಲ್ಲಿ ಕಾರ್ಮಿಕ ಇಲಾಖೆ, ಬೆಸ್ಕಾಂ ಮತ್ತು ಬ್ಯಾಂಕ್‌ಗಳಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಿ ಇತ್ಯರ್ಥ ಪಡಿಸಲಾಗುವುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ರಮೇಶ್ ತಿಳಿಸಿದ್ದಾರೆ.

ತಿಳಿಸಿದರು.

2/3/2011

ವಿದ್ಯುತ್ ಖರೀದಿ ಹಗರಣದ ಸದನ ಸಮಿತಿ ವರದಿ ಸಲ್ಲಿಕೆ ವಿಳಂಬವಾಗಲು



ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರೇ ಕಾರಣ. ಒಮ್ಮೆ ಅವರು ಸಮಿತಿ ಸಭೆಗೆ ಬರುತ್ತಾರೆ, ಅಲ್ಪಸ್ವಲ್ಪ ಮಾಹಿತಿ ನೀಡುತ್ತಾರೆ, ಮತ್ತೊಂದು ಸಲ ಸಮಿತಿ ಮೇಲೆ ನಂಬಿಕೆ ಇಲ್ಲ ಅಂತ ದೂರ ಸರಿಯುತ್ತಾರೆ. ಈಗಲೂ ಕುಮಾರಸ್ವಾಮಿ ಅವರು ಸಮಿತಿ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಲಿ. ಶೀಘ್ರದಲ್ಲೇ ವರದಿ ನೀಡುತ್ತೇವೆ.

• **ಡಿ.ಕೆ.ಶಿವಕುಮಾರ್** ಇಂಧನ ಸಚಿವ

ಪ್ರಜಾವಾಣಿ ಪುಟ ಸಂ 7 02/03/17

## ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆಯ ತಾಯಿ, ಸಹೋದರರಿಗೆ ಸೌರ ವಿದ್ಯುತ್ ಘಟಕದ ಟೆಂಡರ್

# ಹೆಬ್ಬಾಳ್ಕರ ಕುಟುಂಬಕ್ಕೆ ಬೆಳಕಾದ ಇಂಧನ ಇಲಾಖೆ!

• ವೈ.ಗ. ಜಗದೀಶ್

ಬೆಂಗಳೂರು: ಕರ್ನಾಟಕ ರಾಜ್ಯ ನವೀಕೃತ ಇಂಧನ ಅಭಿವೃದ್ಧಿ ನಿಗಮವು ಸೌರ ವಿದ್ಯುತ್ ಉತ್ಪಾದನಾ ಘಟಕ ಯೋಜನೆಯಡಿ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಲಕ್ಷ್ಮೀ ಹೆಬ್ಬಾಳ್ಕರ ಅವರ ಕುಟುಂಬದವರಿಗೆ ಲಾಭ ಮಾಡಿಕೊಟ್ಟಿದೆ ಎನ್ನಲಾಗಿದೆ.

ಲಕ್ಷ್ಮೀ ಹೆಬ್ಬಾಳ್ಕರ ಅವರ ತಾಯಿ ಗಿರಿಜಾ ಹಟ್ಟಿಹೊಳಿ ಮತ್ತು ಸೋದರ ಚನ್ನರಾಜ ಹಟ್ಟಿಹೊಳಿ ಸೇರಿ ಒಂದೇ ಕುಟುಂಬಕ್ಕೆ ಸೇರಿದ ಮೂವರು ಹಾಗೂ ಅದಕ್ಕೂ ಹೆಚ್ಚಿನ ಸಂಖ್ಯೆಯ ಆಪ್ತರಿಗೆ ಸೌರವಿದ್ಯುತ್ ಯೋಜನೆಗಳ ಟೆಂಡರ್ ಸಿಕ್ಕಿರುವ ದಾಖಲೆ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

**ಒಂದೇ ಮೂಲ:** ಇಂಧನ ಇಲಾಖೆಯು 'ಕರ್ನಾಟಕ ಸೌರ ವಿದ್ಯುತ್ ನೀತಿ: 2014- 2021'ರ ಅಡಿಯಲ್ಲಿ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ವಿಶೇಷ ಯೋಜನೆ ಜಾರಿಗೆ ತಂದಿತ್ತು. ಸ್ವಂತ ಭೂಮಿ ಹೊಂದಿದ ರೈತರು ವಿದ್ಯುತ್ ಉತ್ಪಾದನಾ ಘಟಕ ಆರಂಭಿಸುವುದಾದಲ್ಲಿ ₹8.40 ದರದಲ್ಲಿ ಪ್ರತಿ ಯೂನಿಟ್ ವಿದ್ಯುತ್ ಖರೀದಿಸುವ ವಾಗ್ದಾನದೊಂದಿಗೆ ಈ ಯೋಜನೆಗೆ ಚಾಲನೆ ನೀಡಲಾಗಿತ್ತು.

26,000 ರೈತರು ಆಸಕ್ತಿ ತೋರಿ ಪ್ರಸ್ತಾವನೆ ಸಲ್ಲಿಸಿದ್ದರು. ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಕೆಗೆ 2014ರ ಅಕ್ಟೋಬರ್ 9ರಂದು ಸಮಯ ನಿಗದಿಯಾಗಿತ್ತು. ಸೌರ ವಿದ್ಯುತ್ ಉತ್ಪಾದಿಸಲು ಅವಕಾಶ ಇರುವ ಜಿಲ್ಲೆಗಳಲ್ಲಿನ ರೈತರು ತಮ್ಮ ಮಕ್ಕಳು, ಕಂಪ್ಯೂಟರ್ ಪರಿಜ್ಞಾನ ಇರುವವರನ್ನು ಕೂರಿಸಿಕೊಂಡು ಟೆಂಡರ್‌ನಲ್ಲಿ ಪಾಲ್ಗೊಳ್ಳಲು ಅಣಿಯಾಗಿದ್ದರು. ಇದಕ್ಕಾಗಿ ಬ್ಯಾಂಕ್‌ಗಳಲ್ಲಿ ನಿಗದಿತ ಶುಲ್ಕದ ಡಿ.ಡಿ (ಡಿಮ್ಯಾಂಡ್ ಡ್ರಾಫ್ಟ್) ತೆಗೆದಿದ್ದರು.

ಕೇವಲ 7.25 ನಿಮಿಷ ಅವಧಿಯಲ್ಲಿ ಆನ್‌ಲೈನ್ ಟೆಂಡರ್ ಪ್ರಕ್ರಿಯೆ ಮುಗಿದಿತ್ತು. 295 ಜನರಿಂದ ಟೆಂಡರ್ ಸ್ವೀಕರಿಸಿದ್ದ ಇಂಧನ ಇಲಾಖೆಯ 'ಪವಾಡ' ವಿವಾದಕ್ಕೆ ಗುರಿಯಾಗಿತ್ತು.

ಟೆಂಡರ್‌ನಲ್ಲಿ ಪಾಲ್ಗೊಳ್ಳಲು ರೈತರು ವೆಬ್‌ಸೈಟ್ ತೆರೆಯುವ ಮೊದಲೇ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಂಡು ಆನ್‌ಲೈನ್ ಬ್ಲಾಕ್ ಆಗಿತ್ತು. ನಿಜವಾದ ರೈತರಿಗೆ ಯೋಜನೆಯ ಫಲ ಸಿಗುವುದನ್ನು ಉದ್ದೇಶಪೂರ್ವಕವಾಗಿ ತಪ್ಪಿಸಲಾಗಿತ್ತು ಎಂಬ ಆರೋಪವೂ ಕೇಳಿಬಂದಿತ್ತು.

ಲಕ್ಷ್ಮೀ ಹೆಬ್ಬಾಳ್ಕರ ಅವರ ಕುಟುಂಬ ಅಕ್ಟೋಬರ್ 9ರ ಬೆಳಿಗ್ಗೆ 11 ಗಂಟೆ 1 ನಿಮಿಷ 14 ಸೆಕೆಂಡ್ ನಿಂದ 11 ಗಂಟೆ 2 ನಿಮಿಷ 7 ಸೆಕೆಂಡ್ ಅವಧಿಯಲ್ಲಿ ಅಂದರೆ 52 ಸೆಕೆಂಡ್ ಅವಧಿಯಲ್ಲಿ 3 ಜನರ ಅರ್ಜಿಗಳನ್ನು ಭರ್ತಿ ಮಾಡಿ, ಅಪ್‌ಲೋಡ್ ಮಾಡಿರುವುದು ದಾಖಲೆಯಲ್ಲಿ ಉಲ್ಲೇಖವಾಗಿದೆ.

ಈ ಮೂರು ಅರ್ಜಿಗಳಲ್ಲಿ ಲಕ್ಷ್ಮೀ ಹೆಬ್ಬಾಳ್ಕರ ಸೋದರ ಮತ್ತು ಹರ್ಷ ಶುಗರ್ಸ್ ನಿರ್ದೇಶಕ ಚನ್ನರಾಜ ಬಿ ಹಟ್ಟಿಹೊಳ್ಳಿ ಅವರ ಮೊಬೈಲ್ ಸಂಖ್ಯೆ (9449014000) ಉಲ್ಲೇಖವಾಗಿದೆ. ಮೂವರೂ 3 ಮೆಗಾವಾಟ್ ಸಾಮರ್ಥ್ಯದ ಸೌರ ವಿದ್ಯುತ್ ಘಟಕ ಸ್ಥಾಪನೆಗೆ ಅರ್ಜಿ ಸಲ್ಲಿಸಿದ್ದು, ಹುಬ್ಬಳ್ಳಿಯ ಕಾರ್ಪೊರೇಶನ್ ಬ್ಯಾಂಕ್‌ನಲ್ಲಿ ಒಂದೇ ದಿನ ಡಿ.ಡಿ ತೆಗೆದಿದ್ದಾರೆ. ಈ ಮೂವರಿಗೂ ಅನುಮತಿ ಸಿಕ್ಕಿರುವುದು ಕುತೂಹಲದ ಸಂಗತಿ.

**ತಿಂಗಳ ಮೊದಲು ಜಮೀನು ಖರೀದಿ:** ಸ್ವಂತ ಭೂಮಿ ಹೊಂದಿರುವ ರೈತರು ಮಾತ್ರ ಈ ಯೋಜನೆಯಡಿ ಅರ್ಜಿ ಸಲ್ಲಿಸುವ ನಿರ್ಬಂಧ ವಿಧಿಸಲಾಗಿತ್ತು.

ಚನ್ನರಾಜ ಬಿ. ಹಟ್ಟಿಹೊಳಿ ಮತ್ತು ಗಿರಿಜಾ ಹಟ್ಟಿಹೊಳಿ ಅವರು ಸೌರವಿದ್ಯುತ್ ಘಟಕ ಸ್ಥಾಪನೆಗೆ ಅರ್ಜಿ ಸಲ್ಲಿಸುವ ( 2014ರ ಅಕ್ಟೋಬರ್ 9) ದಿನಾಂಕಕ್ಕೆ ಕೇವಲ ಒಂದೆರಡು ತಿಂಗಳ ಮೊದಲಷ್ಟೇ ಭೂಮಿ ದಾಖಲೆಯಲ್ಲಿದೆ.

ಚನ್ನರಾಜ ಸವದತ್ತಿ ತಾಲ್ಲೂಕಿನಲ್ಲಿ ಆಗಸ್ಟ್ ತಿಂಗಳಿನಲ್ಲಿ ಭೂಮಿ ಖರೀದಿಸಿದ್ದರೆ, ಅವರ ತಾಯಿ ಗಿರಿಜಾ ಅರ್ಜಿ ಸಲ್ಲಿಸುವ 1 ತಿಂಗಳ ಮೊದಲು ಭೂಮಿ ಖರೀದಿ ಮಾಡಿದ್ದರು. ಈರವ್ವ ಪಾಟೀಲ ಅವರ 6 ಎಕರೆ ಭೂಮಿಯನ್ನು ಆಗಸ್ಟ್ ತಿಂಗಳಿನಲ್ಲಿ ದಾನ ರೂಪದಲ್ಲಿ ಪಡೆದು, ತಮ್ಮ ಹೆಸರಿಗೆ ಮಾಡಿಕೊಂಡಿರುವುದನ್ನು ದಾಖಲೆ ಹೇಳುತ್ತದೆ.



**ಒಂದೇ ಕುಟುಂಬದವರು ಎಂಬುದಕ್ಕೆ ಇರುವ ದಾಖಲೆ**

| ಹೆಸರು | ಮೊಬೈಲ್ ಸಂಖ್ಯೆ | ಡಿ.ಡಿ. ತೆಗೆದ ದಿನಾಂಕ | ಡಿ.ಡಿ ಸಂಖ್ಯೆ | ಬ್ಯಾಂಕ್ |
|---|---|---|---|---|
| ಚನ್ನರಾಜ ಬಿ ಹಟ್ಟಿಹೊಳಿ | 944901400 | 7.10.14 | 236049 | ಕಾರ್ಪೊರೇಶನ್ ಬ್ಯಾಂಕ್ |
| ಗಿರಿಜಾ ಬಿ ಹಟ್ಟಿಹೊಳಿ | 944901400 | 7.10.14 | 236067 | |
| ಈರವ್ವ ಆರ್ ಪಾಟೀಲ | 944901400 | 7.10.14 | 236065 | |

### 'ಬುದ್ಧಿವಂತರಿಗೆ ಟೆಂಡರ್ ಸಿಕ್ಕಿದೆ'

'ರೈತರ ಆದಾಯ ಹೆಚ್ಚಿಸಲು ರೂಪಿಸಲಾದ ಸೌರ ವಿದ್ಯುತ್ ಯೋಜನೆಯ ಟೆಂಡರ್ ಪಾರದರ್ಶಕವಾಗಿ ನಡೆದಿದೆ. ಬುದ್ಧಿವಂತರು ಈ ಯೋಜನೆಯ ಲಾಭ ಪಡೆದಿದ್ದಾರೆ' ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯೆ ನೀಡಿದ್ದಾರೆ.

'ಲಕ್ಷ್ಮೀ ಹೆಬ್ಬಾಳ್ಕರ್ ಮಾತ್ರವಲ್ಲ. ಕೇಂದ್ರ ಸಚಿವ ರಮೇಶ ಜಿಗಜಿಣಗಿ, ಶಾಸಕ ರಾಜೇಶ್ ಕುಟುಂಬದವರಿಗೂ ಟೆಂಡರ್ ಸಿಕ್ಕಿದೆ. ಟೆಂಡರ್ ಪ್ರಕ್ರಿಯೆಯನ್ನು ನಾನು ನಡೆಸಿಲ್ಲ. ನಾನು ಮಂಜೂರಾತಿ ಮಾಡಿಲ್ಲ. ಕೇಂದ್ರ ಸರ್ಕಾರಿ ಸ್ವಾಮ್ಯದ ಸಂಸ್ಥೆ ಅಂತಿಮಗೊಳಿಸಿದೆ. ಡೇಟಾ ಎಂಟ್ರಿಯಲ್ಲಿ ಪರಿಣತಿ ಪಡೆದ ಗ್ರಾಮ ಲೆಕ್ಕಿಗರ ಸಹಾಯ ಪಡೆದು ಕೆಲವರು ಟೆಂಡರ್ ಪಡೆದಿದ್ದಾರೆ. ಇದರಲ್ಲಿ ಯಾವುದೇ ಅಕ್ರಮ ನಡೆದಿಲ್ಲ' ಎಂದು ಶಿವಕುಮಾರ್ ಪ್ರತಿಪಾದಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈ ಯೋಜನೆಯನ್ನು ಮೆಚ್ಚಿ 6 ಸಾವಿರ ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ ಯೋಜನೆ ರೂಪಿಸಿದೆ. ರಾಜ್ಯಕ್ಕೂ 599 ಮೆಗಾವಾಟ್ ವಿದ್ಯುತ್ ಉತ್ಪಾದನೆ ಯೋಜನೆ ಸಿಗಲಿದೆ ಎಂದು ಅವರು ಹೇಳಿದರು.

### ಅಕ್ರಮ ನಡೆದಿಲ್ಲ: ಚನ್ನರಾಜ ಸ್ಪಷ್ಟನೆ

'ಸೌರ ವಿದ್ಯುತ್ ಉತ್ಪಾದನೆ ಘಟಕ ಮಂಜೂರಾತಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ. ಕಾನೂನು ಪ್ರಕಾರವೇ ಪಡೆದುಕೊಂಡಿದ್ದೇವೆ' ಎಂದು ಲಕ್ಷ್ಮೀ ಹೆಬ್ಬಾಳ್ಕರ ಅವರ ಸೋದರ ಚನ್ನರಾಜ ಹಟ್ಟಿಹೊಳಿ ಸಮರ್ಥಿಸಿಕೊಂಡಿದ್ದಾರೆ.

'ನಾನು ಹಡಗು ಕಟ್ಟುವ ತಂತ್ರಜ್ಞಾನದಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿದ್ದೇನೆ. ನನಗೆ ತಾಂತ್ರಿಕ ಜ್ಞಾನ ಗೊತ್ತಿದೆ. ನಮ್ಮ ಕುಟುಂಬದವರು ಮಾತ್ರವಲ್ಲ ತುಂಬಾ ಜನರ ಅರ್ಜಿಯನ್ನು ನಾನೇ ತುಂಬಿ, ಅಪ್‌ಲೋಡ್ ಮಾಡಿದ್ದೇನೆ. ಎಲ್ಲಾ ಅರ್ಜಿಗಳಲ್ಲಿ ನನ್ನ ಮೊಬೈಲ್ ನಂಬರ್ ಉಲ್ಲೇಖಿಸಿದ್ದೇನೆ. ಫಲಾನುಭವಿಯಾಗಿ ತಪ್ಪು ಮಾಡಿಲ್ಲ. ಸರ್ಕಾರ ತಪ್ಪು ಮಾಡಿದ್ದರೆ ನನಗೆ ಗೊತ್ತಿಲ್ಲ ಎಂದಿದ್ದಾರೆ.